ಸಿಂಧನೂರು ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿರುವುದು

1125 (1605)

ಶ್ರೀ ವಿರೂಪಾಕ್ಷಪ್ಪ.ಕೆ. (ಸಿಂಧನೂರು) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಸಿಂಧನೂರು ನಗರದ ಪಿ.ಡಬ್ಲ್ಯೂಡಿ ಕೆ.ಇ.ಬಿ. ಲಕ್ಷ್ಮಿಕ್ಯಾಂಪ್ ಏಳುರಾಗಿ ಕ್ಯಾಂಪ್ ಮತ್ತು ಮುಚ್ಚಳ ಕ್ಯಾಂಪ್ ಬಡಾವಣೆಗಳಿಗೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು ಯಾವುವು

3. ಶಾಶ್ವತವಾಗಿ ಈ ಎಲ್ಲಾ ಬಡಾವಣೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸರ್ಕಾರ ತೆಗೆದು ಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು.) :

1. ಹೌದು

2. ಮುಚ್ಚಳ ಕ್ಯಾಂಪ್‌ನಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದು, ನೀರಿನ ಇಳುವರಿ ಕಡಿಮೆಯಾದ ಕಾರಣ ಹ್ಯಾಂಡ್ ಪಂಪ್ ಅಳವಡಿಸಲಾಗಿದೆ.

ಉಳಿದ ಬಡಾವಣೆಗಳಿಗೆ ಶಾಶ್ವತ ನೀರು ಸೌಲಭ್ಯ ಕಲ್ಪಿಸಲು ಕ್ರಮವಾಗಿ ರೂ.1.85ಲಕ್ಷ ಮತ್ತು ರೂ.2.60 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿದೆ.

3. ಒಂದು ಆರ್.ಸಿ.ಸಿ. ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸಿ, ಈ ಎಲ್ಲಾ ಪ್ರದೇಶಗಳಿಗೂ ಶಾಶ್ವತ ಕುಡಿಯುವ ನೀರು ಸೌಲಭ್ಯ ಕಲ್ಪಿಸಬೇಕಾಗಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆಗೆ ನೀಡಬೇಕಾದ ಹೆಚ್ಚುವರಿ ಅನುದಾನ.

1126(1683)

ಶ್ರೀ. ಯೋಗಿಶ್ ಭಟ್. ಎಂಎಲ್‌ಎ (ಮಂಗಳೂರು) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೊರತೆಯಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಆ) ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಇ) ರಾಜ್ಯದ ಮಹಾನಗರಪಾಲಿಕೆಗಳಿಗೆ ಕೊಟ್ಟಿರುವ ಹೆಚ್ಚುವರಿ ಗ್ರ್ಯಾಂಟು ಎಷ್ಟು? 1998-99, 1999-2000ರಲ್ಲಿ ಎಷ್ಟು? ಮಂಗಳೂರು ಮಹಾನಗರ ಪಾಲಿಕೆಗೆ ಕೊಡಲು ಬಾಕಿಯಿರುವ ಸರ್ಕಾರದ ಅನುದಾನದ ಮೊತ್ತ ಎಷ್ಟು? ಹಾಗೂ ಅದನ್ನು ಯಾವಾಗ ಕೊಡಲಾಗುವುದು?